# <u>ಕರ್ನಾಟಕ ಲೋಕಾಯುಕ್ತ</u>

**ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-8232/2015/ಡಿಆರ್ಇ-5**
**ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-8324/2015/ಡಿಆರ್ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:01-03-2018

## *<u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ</u>*

ವಿಷಯ: ಶ್ರೀ ಲೋಕೇಶ, ವಾಸ: ಕನಕನಗರ, ಕೆ.ಹೆಚ್.ಬಿ. ಲೇಔಟ್, ಚನ್ನಪಟ್ಟಣ ಪಟ್ಟಣ ಇವರು ಆಯುಕ್ತರು, ಸಿ.ಎಂ.ಸಿ. ಚನ್ನಪಟ್ಟಣ ನಗರ ಮತ್ತು ಶ್ರೀ ಎಸ್.ಎನ್. ರಮಣಿ, ವಾಸ: ವಿವೇಕಾನಂದ ನಗರ ರಾಮನಗರ ಇವರುಗಳು ಸಲ್ಲಿಸಿರುವ ದೂರಿನ ಬಗ್ಗೆ.

****

ಕಂಪ್ಲೇಂಟ್/ಉಪಲೋಕ್/ಬಿ.ಡಿ-8232/2015 ರಲ್ಲಿ ದೂರುದಾರರಾದ ಶ್ರೀ ಲೋಕೇಶ, ವಾಸ: ಕನಕನಗರ, ಕೆ.ಹೆಚ್.ಬಿ. ಲೇಔಟ್, ಚನ್ನಪಟ್ಟಣ ಪಟ್ಟಣ ಮತ್ತು ಕಂಪ್ಲೇಂಟ್/ಉಪಲೋಕ್/ಬಿ.ಡಿ-8324/2015 ರಲ್ಲಿ ದೂರುದಾರರಾದ ಶ್ರೀ ಎಸ್.ಎನ್. ರಮಣಿ, ವಾಸ: ವಿವೇಕಾನಂದ ನಗರ ರಾಮನಗರ **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರುಗಳು ಕ್ರಮವಾಗಿ (1) ಆಯುಕ್ತರು, ಚನ್ನಪಟ್ಟಣ ನಗರ ಸಭೆ ಮತ್ತು (2) ಚನ್ನಪಟ್ಟಣ ನಗರ ಸಭೆಯ ಸಿಬ್ಬಂದಿ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ಇವರುಗಳ ವಿರುದ್ಧ ಗೌರವಾನ್ವಿತ ಲೋಕಾಯುಕ್ತರು ರಾಮನಗರ ಕ್ಯಾಂಪಿನಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ವಿಚಾರಿಸುತ್ತಿರುವಾಗ ಈ ದೂರುಗಳನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದ ದೂರುಗಳನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ಕಂಪ್ಲೇಂಟ್/ಉಪಲೋಕ್/ಬಿ.ಡಿ-8232/2015 ರಲ್ಲಿನ ದೂರಿನ ಸಂಕ್ಷಿಪ್ತ ವಿವರ:**

(ಎ) ದೂರುದಾರರು ತಮ್ಮ ದೂರಿನಲ್ಲಿ ಚನ್ನಪಟ್ಟಣದ ಪುರಸಭೆಯಲ್ಲಿ ಕಳೆದ 10-15 ವರ್ಷಗಳಿಂದ ಸಿಬ್ಬಂದಿ ವರ್ಗದವರು ಅವರೇ ಕೆಲಸ ಮಾಡುತ್ತಿದ್ದು ಬೇರೆ ಕಡೆ ವರ್ಗಾವಣೆ ಆಗಿಲ್ಲ. ಆದ್ದರಿಂದ ಅವರು ಆಸ್ತಿಗಳಿಗೆ ಸಂಬಂಧಿಸಿದ ಖಾತೆಗಳನ್ನು ಕಾನೂನುಬಾಹಿರವಾಗಿ ತಮಗೆ ಸೇರಿಕಂಡಂತೆ ಬದಲಾವಣೆ ಮಾಡುತ್ತಾರೆ. 4 ವರ್ಷಗಳ ಕೆಳಗೆ ಲೋಕಾಯುಕ್ತ ಪೋಲೀಸ್‌ರು ಆಶ್ರಯ ಮತ್ತು ಐ.ಡಿ.ಎಸ್.ಎಂ.ಟಿ. ಬಡಾವಣೆಗೆ ಸಂಬಂಧಿಸಿದ ತನಿಖೆಯನ್ನು ಕೈಗೆತ್ತಿಕೊಂಡಿದ್ದು ಅಧಿಕಾರಿಗಳ ಒತ್ತಡದಿಂದಾಗಿ ತನಿಖೆಯು ಮಂದಗತಿಯಲ್ಲಿ ಸಾಗುತ್ತಿದೆ. ಕರೆಗಳನ್ನು ಒತ್ತುವರಿ ಮಾಡಿ ಲೇಔಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಆದ್ದರಿಂದ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಕೋರಿಕೊಂಡಿದ್ದಾರೆ.

3. **ಕಂಪ್ಲೇಂಟ್/ಉಪಲೋಕ್/ಬಿ.ಡಿ-8232/2015 ರಲ್ಲಿನ ದೂರಿನ ಸಂಕ್ಷಿಪ್ತ ವಿವರ:**

(ಎ) ನನ್ನ ತಂದೆಗೆ ಸಂಬಂಧಿಸಿದ ಸೈಟ್ 60*40 ಅಡಿ ಐ.ಡಿ.ಎಸ್.ಎಂ.ಟಿ. ಲೇಔಟ್ ಸರ್ವೆ ನಂ.2114ಎ/42 ರಲ್ಲಿ ಇರುತ್ತದೆ. ಕಟ್ಟಡದ ಪರವಾನಿಗೆ ಕೋರಿದಾಗ, ಎದುರುದಾರರು ಲೋಕಾಯುಕ್ತದಲ್ಲಿ ಪ್ರಕರಣ ನಡೆಯುತ್ತಿದೆ ಮತ್ತು ತಡೆಯಾಜ್ಞೆ ಇದೆ ಅಂತ ತಿಳಿಸಿದ್ದಾರೆ. ಗೌರವಾನ್ವಿತ ಲೋಕಾಯುಕ್ತರು, ಎದುರುದಾರರಿಗೆ ನಿರ್ದೇಶನ ಕೊಟ್ಟು 15 ದಿನಗಳಲ್ಲಿ ದೃಢೀಕೃತ ನಕಲುಗಳನ್ನು ಪಡೆದು ಅಸಲು ದಾಖಲೆಗಳನ್ನು ಹಿಂತಿರುಗಿಸಲು ಅರ್ಜಿಯನ್ನು ಸಲ್ಲಿಸುವಂತೆ ಮತ್ತು ದೂರುದಾರರಿಗೆ ಮನೆ ನಂಬರ್ ಹಾಗೂ ಕಟ್ಟಡ ಪರವಾನಿಗೆಯನ್ನು ಕೊಡಲು ಕ್ರಮವನ್ನು ವಹಿಸಲು ಸೂಚಿಸಿದ್ದಾರೆ. ಅನುಪಾಲನಾ ವರದಿಯನ್ನು ಸಲ್ಲಿಸಲು 15 ದಿನಗಳ ಸಮಯವನ್ನು ಎದುರುದಾರರಿಗೆ ಕೊಟ್ಟಿರುತ್ತಾರೆ.

4. ಈ ಎರಡು ಪ್ರಕರಣಗಳು ಚನ್ನಪಟ್ಟಣ ನಗರ ಸಭೆಗೆ ಸಂಬಂಧಿಸಿರುವುದರಿಂದ ಒಟ್ಟಿಗೆ ತೆಗೆದುಕೊಳ್ಳಲಾಗಿದೆ. ಗೌರವಾನ್ವಿತ ಲೋಕಾಯುಕ್ತರ ಆದೇಶದಂತೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ತಿಳಿಸಲಾಗಿದೆ. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಜಿಲ್ಲಾಧಿಕಾರಿಗಳು ರಾಮನಗರ ಇವರಿಗೆ ತನಿಖೆಯನ್ನು ಮಾಡುವಂತೆ ಮತ್ತು ಸೂಕ್ತ ಕ್ರಮವಹಿಸುವಂತೆ ನಿರ್ದೇಶಿಸಲಾಗಿರುತ್ತದೆ.

5. ದಿನಾಂಕ: 7-11-2015 ರಿಂದ 5-11-2016 ರವರೆಗೆ ಯಾವುದೇ ಅನುಪಾಲನಾ ವರದಿಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಸಲ್ಲಿಸಲಿಲ್ಲ. ಆದ್ದರಿಂದ, ಸದರಿ ಅಧಿಕಾರಿಗಳಿಗೆ ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

6. ದಿನಾಂಕ: 18-11-2016 ರಂದು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಸಲ್ಲಿಸಿದ್ದು, ಅದರಲಿ ನಿರ್ದೇಶಕರ ಮಟ್ಟದಲ್ಲಿಯೇ ತನಿಖೆಯನ್ನು ನಡೆಸುವಂತೆ ಕೋರಿಕೊಂಡಿರುವುದು ಕಂಡುಬರುತ್ತದೆ.

7. ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ದಿನಾಂಕ 18-11-2016 ರಂದು ಖುದ್ದು ಹಾಜರಾಗಿ 3 ತಿಂಗಳೊಳಗಾಗಿ ಕ್ರಮವನ್ನು ಕೈಗೊಂಡು ವರದಿಯನ್ನು ಸಲ್ಲಿಸುವದಾಗಿ ತಿಳಿಸಿದ್ದಾರೆ.

8.    ಹೀಗೆ ಒಬ್ಬರಿಗೊಬ್ಬರು ಪತ್ರವನ್ನು ಮಾತ್ರ ಬರೆಯುತ್ತಿದ್ದುದ್ದರಿಂದ ಜಿಲ್ಲಾಧಿಕಾರಿಗಳ ಮಟ್ಟದ ಯಾವುದಾದರೂ ಐ.ಎ.ಎಸ್. ಅಧಿಕಾರಿಯನ್ನು ಪೌರಾಡಳಿತ ಇಲಾಖೆಯಿಂದ ತೆಗೆದುಕೊಂಡು ಅವರ ಮುಖಾಂತರ ತನಿಖೆಯನ್ನು ಮಾಡಿಲು ಗೌರವಾನ್ವಿತ ಲೋಕಾಯುಕ್ತರು ನಿರ್ದೇಶನಗಳನ್ನು ಕೊಟ್ಟಿದ್ದರಿಂದ, ಜಂಟಿ ನಿರ್ದೇಶಕರನ್ನು ಪುನಃ ಹಾಜರುಪಡಿಸಿಕೊಳ್ಳಲಾಯಿತು.

(ಎ)    ಡಾ॥ ವಿಶಾಲ ಆರ್. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಹಾಗೂ ಶ್ರೀ ಎ.ಬಿ. ಬಸವರಾಜ ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರುಗಳು ದಿನಾಂಕ: 25-3-2017 ರಂದು ಖುದ್ದು ಹಾಜರಾಗಿ, ಪ್ರಾದೇಶಿಕ ಆಯುಕ್ತರ ಕಛೇರಿಯ ಹಂತದಲ್ಲಿ ಎ.ಆರ್.ಸಿ., ಎ.ಸಿ. ರಾಮನಗರ, ಡಿ.ಡಿ.ಎಲ್.ಆರ್. ರಾಮನಗರ ಮತ್ತು ಪಿ.ಡಿ.ಡಿ. ಯು.ಡಿ.ಸಿ., ಇವರ ನೇತೃತ್ವದಲ್ಲಿ ತಂಡವನ್ನು ರಚಿಸಿ ತನಿಖಾ ವರದಿಯನ್ನು ಪಡೆದುಕೊಳ್ಳಬಹುದಾಗಿದೆ ಮತ್ತು ಈ ಬಗ್ಗೆ ಸಣ್ಣ ಬದಲಾವಣೆ ಮಾಡುವಂತೆ ಕೋರಿಕೊಂಡಿದ್ದಾರೆ.

(ಬಿ)    ದಿನಾಂಕ: 30-3-2017 ರಂದು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸಮಿತಿಯನ್ನು ರಚಿಸಿ ವಿಚಾರಣೆಯನ್ನು ಮಾಡಿ ವರದಿಯನ್ನು ಸಲ್ಲಿಸುವಂತೆ ಸೂಚಿಲಾಯಿತು.

(ಸಿ)    ದಿನಾಂಕ: 20-5-2017 ರ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಆದೇಶವಾಗಿದ್ದು, ಅಷ್ಟರೊಳಗೆ ಯಾವುದೇ ವರದಿಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ಸಲ್ಲಿಸಲಿಲ್ಲ. ಆದ್ದರಿಂದ ಸದರಿ ಅಧಿಕಾರಿಗಳಿಗೆ ಕಾರಣ-ಕೇಳುವ-ನೋಟಿಸ್ ಅನ್ನು ಕೊಡಲಾಗಿದೆ.

9.    ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಪತ್ರವನ್ನು ಸಲ್ಲಿಸಿದ್ದು, ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು, ಮತ್ತು ದಾಖಲಾತಿಗಳನ್ನು ಪಡೆಯಲು ತುಂಬಾ ಸಮಯಬೇಕಾಗುತ್ತದೆ. ಆದ್ದರಿಂದ, ಸಮಯವನ್ನು ವಿಸ್ತರಿಸಿಕೊಡಲು ಕೋರಿಕೊಂಡಿದ್ದಾರೆ.

(ಎ)    ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ದಿನಾಂಕ: 23-6-2017 ರಿಂದ 6-9-2017 ರವರೆಗೆ ಸಮಯವನ್ನು ವಿಸ್ತರಿಸಿಕೊಡಲಾಗಿದೆ. ಆದರೂ ಸಹ ಯಾವುದೇ ವರದಿಯನ್ನು ಸಲ್ಲಿಸಲಿಲ್ಲ. ಆದ್ದರಿಂದ, ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಲು ಸದರಿ ಅಧಿಕಾರಿಗಳಿಗೆ ಸೂಚಿಸಲಾಗಿತ್ತು.

10. ತನಿಖಾ ತಂಡದ ಎಲ್ಲಾ ಸದಸ್ಯರಿಗೆ ಅರೇ ಸರ್ಕಾರಿ ಪತ್ರವನ್ನು ಬರೆದು ತುರ್ತು ಕ್ರಮವನ್ನು ವಹಿಸಲು ಸೂಚಿಸಲಾಗಿದೆ ಮತ್ತು ಸರ್ಕಾರದಿಂದ ಸೂಕ್ತ ನಿರ್ದೇಶನಗಳನ್ನು ನೀಡಲು ಕೋರಲಾಗಿದೆ ಅಂತ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಪತ್ರವನ್ನು ಬರೆದಿದ್ದಾರೆ.

11. ದಿನಾಂಕ: 7-11-2011 ರಂದು ಶ್ರೀ ಆರ್.ಮಂಜುನಾಥ, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದಾರೆ. ಸದರಿ ವರದಿಯಲ್ಲಿ ಮಂಗಳವಾರಪೇಟೆ ಗ್ರಾಮದಲ್ಲಿ ರಚಿಸಲಾದ ಐ.ಡಿ.ಎಸ್.ಎಂ.ಟಿ ಬಡಾವಣೆಯಲ್ಲಿ 487 ನಿವೇಶನಗಳು ಹಂಚಿಕೆಯಾಗಿದ್ದರೂ ಸಹ 508 ಖಾತೆಗಳು ಆಗಿವೆ. ತದನಂತರ 555 ಖಾತೆಗಳನ್ನು ದಾಖಲಿಸಿರುವುದು ವರದಿಯಾಗಿರುತ್ತದೆ. ಈ ಪೈಕಿ 182 ಜನರಿಂದ ಮಾತ್ರ ಅರ್ಜಿಗಳು ಸ್ವೀಕೃತವಾಗಿವೆ. ಹೊನ್ನಿಗಾನಹಳ್ಳಿಯ ಆಶ್ರಯ ಬಡಾವಣೆಯಲ್ಲಿ 412 ನಿವೇಶನಗಳನ್ನು ರಚಿಸಲಾಗಿದ್ದು, ಅದರಲ್ಲಿ 218 ಅರ್ಜಿಗಳು ಸ್ವೀಕೃತವಾಗಿದೆ. ಅನುಮೋದಿತ ನಕ್ಷೆಯನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ. ದಾಖಲೆಗಳನ್ನು ತಾಳೆ ನೋಡಲು ಮತ್ತು ನೈಜತೆಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸಮಯವನ್ನು ಕೋರಿಕೊಂಡಿದ್ದಾರೆ. ಎ.ಆರ್.ಸಿ. ರವರ ಹುದ್ದೆ ತಾತ್ಕಾಲಿಕವಾಗಿ ಖಾಲಿ ಇರುವುದರಿಂದ 2ನೇ ಲೇಔಟ್‌ಗೆ ಸಂಬಂಧಪಟ್ಟ ತನಿಖೆಯು ಇನ್ನು ಪೂರ್ಣಗೊಂಡಿಲ್ಲ. 1ನೇ ಲೇಔಟ್‌ನ ತನಿಖೆಯು ಪೂರ್ಣಗೊಂಡಿದೆ ಅಂತ ತಿಳಿಸಿದ್ದಾರೆ.

12. ದಿನಾಂಕ: 21-12-2017 ರಂದು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಶ್ರೀ ರಮೇಶ ಟಿ.ಎಸ್. ಕೇಂದ್ರ ಸ್ಥಾನಿಕ ಸಹಾಯಕರು, ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದಾರೆ. ತನಿಖಾ ತಂಡದ ನೇತೃತ್ವಕ್ಕೆ ಬದಲಿ ವ್ಯವಸ್ಥೆಯನ್ನು ತುರ್ತಾಗಿ ಮಾಡಲು ಸರ್ಕಾರದ ಹಂತದಲ್ಲಿ ಕ್ರಮವನ್ನು ವಹಿಸಲಾಗಿದ್ದು, ಪ್ರಾದೇಶಕ ಆಯುಕ್ತರ ಬದಲಾಗಿ ಅಪರ ಜಿಲ್ಲಾಧಿಕಾರಿಗಳು, ರಾಮನಗರ ಇವರನ್ನು ತನಿಖಾ ತಂಡದ ನೇತೃತ್ವವನ್ನು ವಹಿಸಲು ಆದೇಶವಾಗಿದೆ ಅಂತ ತಿಳಿಸಿದ್ದಾರೆ.

13. ದಿನಾಂಕ: 31-1-2018 ರಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಜಿಲ್ಲೆ ಇವರ ಪರವಾಗಿ ಶ್ರೀ ನಂಜುಂಡಸ್ವಾಮಿ, ದ್ವಿ.ದ.ಸ., ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದಾರೆ. ವರದಿಯಲ್ಲಿ ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ಕುರಿತು ಕ್ರಮ ಸಂ:ಎ ಯಿಂದ ಐ ರ ವರೆಗೆ ಸಂಪೂರ್ಣವಾಗಿ 200 ಸೈಟುಗಳ ಪೈಕಿ ಕ್ರಮಬದ್ಧವಾಗಿರುವ 147 ಸೈಟುಗಳನ್ನು ಬಿಟ್ಟು ಉಳಿದ 53 ಸೈಟುಗಳನ್ನು ನಗರ ಸಭೆಗೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ವಹಿಸಬಹುದಾಗಿದೆ ಅಂತ ನಮೂದಿಸಿದ್ದಾರೆ.

14. ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯ ಮಂಗಳವಾರ ಪೇಟೆಯ ಐ.ಡಿ.ಎಸ್.ಎಂ.ಟಿ ಬಡಾವಣೆಗೆ ಸಂಬಂಧಿಸಿದಂತೆ ಕ್ರಮ ಸಂ: ಎ ಯಿಂದ ಡಿ ಮತ್ತು ಐ ರ ವರೆಗೆ ಕ್ರಮವಹಿಸಲಾಗಿದ್ದು, ಉಳಿದಂತೆ ಪೌರಾಯುಕ್ತರು, ನಗರ ಸಭೆ ಚನ್ನಪಟ್ಟಣ ಇವರು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸದೇ ಅಸಹಕಾರ ತೋರುತ್ತಿರುವುದರಿಂದ, ವರದಿಯನ್ನು ಸಲ್ಲಿಸಲು ತಡವಾಗುತ್ತಿದೆ ಅಂತ ತಿಳಿಸಿದ್ದಾರೆ. ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ 1 ಎಕರೆ 16 ಗುಂಟೆ ನಿವೇಶನ ಹಂಚಿಕೆಗಾಗಿ ಮೀಸಲು ಇಟ್ಟಿರುವ ಜಮೀನು ಒತ್ತುವರಿಯಾಗಿದೆ ಮತ್ತು ಕೆಲವು ಸಾರ್ವಜನಿಕರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ ಅಂತ ತಿಳಿಸಿದ್ದಾರೆ. ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ ಇನ್ನು 9 ಎಕರೆ 11 ಗುಂಟೆ ನಿವೇಶನ ಹಂಚಿಕೆಗಾಗಿ ಜಮೀನು ಸರ್ಕಾರದ ವಶದಲ್ಲಿ ಇರುತ್ತದೆ ಅಂತ ತಿಳಿಸಿದ್ದಾರೆ.

15. ದಿನಾಂಕ: 22-1-2018 ರಂದು ತನಿಖಾ ತಂಡದಿಂದ ವರದಿ ಸ್ವೀಕೃತವಾಗಿಲ್ಲದೇ ಇರುವುದನ್ನು ಗಮನಿಸಿ ದಿನಾಂಕ: 28-4-2015 ರಿಂದಲೂ ವಿಚಾರಣಾ ವರದಿಯನ್ನು ತನಿಖಾ ತಂಡವು ಸಲ್ಲಿಸುತ್ತಿಲ್ಲವಾದ್ದರಿಂದ ಪ್ರಸ್ತುತ ಲಭ್ಯ ಇರುವ ದಾಖಲೆಗಳ ಆಧಾರದ ಮೇರೆಗೆ ದಿನಾಂಕ: 31-1-2018 ರ ಒಳಗಾಗಿ ವರದಿಯನ್ನು ಸಲ್ಲಿಸಲು ಆದೇಶವಾಗಿತ್ತು.

16. ದಿನಾಂಕ: 31-1-2018 ರಂದು ಉಪ ನಿರ್ದೇಶಕರು, ಭೂದಾಖಲೆಗಳು ರಾಮನಗರ ಉಪವಿಭಾಗ, ಸಹಾಯಕ ನಿರ್ದೇಶಕರು, ಭೂದಾಖಲೆಗಳು ಚನ್ನಪಟ್ಟಣ ತಾಲ್ಲೂಕು, ಉಪವಿಭಾಗಾಧಿಕಾರಿಗಳು, ರಾಮನಗರ ಉಪವಿಭಾಗ, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ರಾಮನಗರ ಜಿಲ್ಲೆ ಇವರುಗಳು ಖುದ್ದು ಹಾಜರಾಗಿ ವಿಸ್ತಾರವಾದ ವರದಿಯನ್ನು ಅನುಕ್ರಮಣಿಕೆ ನಂ:1 ರಿಂದ 7 ರಂತೆ ಸಲ್ಲಿಸಿದ್ದಾರೆ.

17. ಚನ್ನಪಟ್ಟಣ ನಗರ ಸಭೆಯ ವ್ಯಾಪ್ತಿಯ ಹೊನ್ನಿಗಾನ ಹಳ್ಳಿ ಗ್ರಾಮದಲ್ಲಿ ಒಟ್ಟು 31.13 ಎಕರೆ ಜಮೀನನ್ನು ವಾಸದ ನಿವೇಶನಗಳ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಅದರ ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರ.ಸಂ: | ಸರ್ವೆ ನಂ. | ವಿಸ್ತೀರ್ಣ ಎಕರೆ/ಗುಂಟೆ |
|---|---|---|
| 01 | 112/1 | 1.20 |
| 02 | 112/2 | 0.30 |
| 03 | 113 | 2.13 |
| 04 | 114 | 1.08 |
| 05 | 116 | 0.38 |
| 06 | 120/3 | 0.38 |

| | | |
|---|---|---|
| 07 | 120/1 | 2.18 |
| 08 | 121/2 | 0.22 |
| 09 | 121/3ಜೆ | 0.30 |
| 10 | 122/1 | 0.30 |
| 11 | 122/2 | 1.32 |
| 12 | 122/3ಜೆ | 0.18 |
| 13 | 129/1 | 3.09 |
| 14 | 129/2ಜೆ | 2.05 |
| 15 | 129/2ಸಿ | 0.30 |
| 16 | 130 | 2.11 |
| 17 | 131/1 | 1.01 |
| 18 | 131/2 | 2.26 |
| 19 | 131/3 | 1.32 |
| 20 | 132 | 0.37 |
| 21 | 132 | 0.26 |
| ಒಟ್ಟು | | 31.13 |

(ಎ) ಮೇಲೆ ವಿವರಿದ ಜಮೀನುಗಳಲ್ಲದೇ ಸರ್ವೆ ನಂ.16/3 ರಿಂದ ಸರ್ವೆ ನಂ.23 ರವರೆಗೆ ಮಂಗಳವಾರ ಪೇಟೆ ಗ್ರಾಮಗಳಲ್ಲಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಅಂತ ತಿಳಿಸಿದ್ದಾರೆ. ಈ ಎಲ್ಲಾ ಜಮೀನುಗಳ ಸರಹದ್ದುಗಳನ್ನು ಗುರುತಿಸಿ ಗಡಿ-ಕಲ್ಲುಗಳನ್ನು ಹಾಕಿಸಲಾಗಿದೆ ಅಂತ ವರದಿಯಲ್ಲಿ ತಿಳಿಸಿದ್ದಾರೆ.

(ಬಿ) ಸದರಿ ವರದಿಯಲ್ಲಿ ಚನ್ನಪಟ್ಟಣ ನಗರ ಸಭೆ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರದ ಕುರಿತು ಕ್ರಮಬದ್ಧವಾಗಿರುವ 147 ಸೈಟುಗಳನ್ನು ಬಿಟ್ಟು ಉಳಿದ 33 ಸೈಟುಗಳನ್ನು ನಗರ ಸಭೆಗೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮವಹಿಸಬಹುದಾಗಿದೆ. ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯ ಮಂಗಳವಾರ ಪೇಟೆಯ ಐ.ಡಿ.ಎಸ್.ಎಂ.ಟಿ ಬಡಾವಣೆಗೆ ಸಂಬಂಧಿಸಿದಂತೆ ಕ್ರಮ ಸಂ:ಎ ಯಿಂದ ಡಿ ಮತ್ತು ಐ ವರೆಗೆ ಕ್ರಮವನ್ನು ವಹಿಸಲಾಗಿದೆ. ಉಳಿದಂತೆ ಪೌರಾಯುಕ್ತರು ನಗರ ಸಭೆ ಚನ್ನಪಟ್ಟಣ ಇವರು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸದೇ ಅಸಹಕಾರ ತೋರುತ್ತಿದ್ದುದ್ದರಿಂದ ವರದಿಯನ್ನು ಸಲ್ಲಿಸಲು ತಡವಾಗುತ್ತಿದೆ. ಚನ್ನಪಟ್ಟಣ ನಗರ ಸಭೆ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ 1 ಎಕರೆ 16 ಗುಂಟೆ ನಿವೇಶನಗಳಿಗಾಗಿ ಮೀಸಲು ಇಟ್ಟಿರುವ ಜಮೀನು ಒತ್ತುವರಿಯಾಗಿದೆ. ಕೆಲವು ಸಾರ್ವಜನಿಕರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ ಹಾಗೂ ಇದರಲ್ಲಿ ಇನ್ನು 9 ಎಕರೆ 11 ಗುಂಟೆ ನಿವೇಶನ ಹಂಚಿಕೆಗಾಗಿ ಇಟ್ಟಿರುವ ಜಮೀನು ಸರ್ಕಾರದ ವಶದಲ್ಲಿರುತ್ತದೆ ಅಂತ ನಮೂದಿಸಿದ್ದಾರೆ.

(ಸಿ) ಮೇಲ್ಕಂಡ ವರದಿಯ ಜೊತೆಗೆ ಅಪರ ಪ್ರಾದೇಶಿಕ ಆಯುಕ್ತರ ಹುದ್ದೆ ಖಾಲಿ ಇರುವುದರಿಂದ ಪೂರ್ಣ ವರದಿ ಸಲ್ಲಿಸುವ ಬಗ್ಗೆ ನಿರ್ದೇಶನವನ್ನು ಕೋರಿದ್ದಾರೆ. ಮತ್ತು ಪೂರ್ಣ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಬೇಕೆಂದು ಕೋರಿಕೊಂಡಿದ್ದಾರೆ.

18. ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ (ಎ.ಆರ್.ಸಿ) ಇವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ ಗೌರವಾನ್ವಿತ ಲೋಕಾಯುಕ್ತರು ಆದೇಶವನ್ನು ಕೊಟ್ಟಿದ್ದು ಸೂಕ್ತ ಕ್ರಮಗಳನ್ನು ವಹಿಸಲು 31.13 ಎಕರೆ ಹೊನ್ನಿಗಾನಹಳ್ಳಿಯ ಜಮೀನುಗಳನ್ನು ಸ್ಥಳ ಪರಿಶೀಲನೆ ಮಾಡಿ ಚನ್ನಪಟ್ಟಣ ನಗರದ ವ್ಯಾಪ್ತಿಯಲ್ಲಿ ಬರುವ ಮಂಗಳವಾರ ಪೇಟೆ ಗ್ರಾಮದ ಸರ್ವೆ ನಂ.16/3 ರಿಂದ 23 ರ ವರೆಗಿನ ಎಲ್ಲಾ ಜಮೀನುಗಳನ್ನು ಸ್ಥಳ ಪರಿಶೀಲನೆ ಮಾಡಿ ಅವುಗಳಿಗೆ ಚಕ್‌ಬಂದಿಗಳನ್ನು ಹಾಕಿ ಬೌಂಡರಿ ಕಲ್ಲುಗಳನ್ನು ನಡುವಂತೆ, ಸಾರ್ವಜನಿಕರಿಗೆ ನೋಟಿಸ್ ಕೊಟ್ಟು ಸೈಟುಗಳ ವಿತರಣೆ ಆಗಿರುವ ವ್ಯಕ್ತಿಗಳಿಂದ ಮೂಲ ದಾಖಲಾತಿಗಳನ್ನು ತೆಗೆದುಕೊಳ್ಳುವಂತೆ ಕಾನೂನಿನ ವಿರುದ್ಧವಾಗಿ ಆಗಿರುವ ಖಾತೆಗಳನ್ನು ರದ್ದುಪಡಿಸುವಂತೆ ಮತ್ತು ಅಂತಹ ಸೈಟುಗಳನ್ನು ಅರ್ಹ ವ್ಯಕ್ತಿಗಳಿಗೆ ಹಂಚುವಂತೆ ಪೋರ್ಜರಿ ಆಗಿರುವ ದಾಖಲಾಗಿಗಳ ಬಗ್ಗೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವಂತೆ ಸೂಚಿಸಲಾಗಿದೆ. ಅದರಂತೆ ಕ್ರಮ ವಹಿಸಲಾಗಿದ್ದು, ಪೌರಾಯುಕ್ತರು ನಗರ ಸಭೆ ಚನ್ನಪಟ್ಟಣ ಇವರು 7 ಜನ ನಿವೃತ್ತ ಪೌರಾಯುಕ್ತರ ವಿರುದ್ಧ ನಗರ ಪೋಲೀಸ್ ಠಾಣೆ ಚನ್ನಪಟ್ಟಣ ಇವರಲ್ಲಿ ಎಫ್.ಐ.ಆರ್. ದಾಖಲಿಸಿರುತ್ತಾರೆ.

(ಎ) ಒತ್ತುವರಿ ಆಗಿರುವ 1 ಎಕರೆ 16 ಗುಂಟೆ ಜಮೀನನ್ನು ನಿಯಮಾನುಸಾರ ನಗರ ಸಭೆಯ ವಶಕ್ಕೆ ಪಡೆಯಲು ಪೌರಾಯುಕ್ತರು ನಗರ ಸಭೆ ಚನ್ನಪಟ್ಟಣ ಇವರಿಗೆ ಸೂಚಿಸಬಹುದಾಗಿದೆ ಅಂತ ಅಂತ ಕೋರಿರುತ್ತಾರೆ.

(ಸಿ) ಉಳಿದಿರುವ 10 ಎಕರೆ 20 ಗುಂಟೆಗಳಲ್ಲಿ ನಿಯಮಾನುಸಾರ ನಿವೇಶನಗಳನ್ನು ರಚಿಸಿ ಚನ್ನಪಟ್ಟಣ ನಗರದಲ್ಲಿ ನಿವೇಶನ ರಹಿತರನ್ನು ಗುರುತಿಸಿ ನಿವೇಶನ ಹಂಚಿಕೆಗೆ ಕ್ರಮವಹಿಸಲು ಪೌರಾಯುಕ್ತರು ಚನ್ನಪಟ್ಟಣ ನಗರ ಸಭೆ ಇವರಿಗೆ ಸೂಚಿಸಬಹುದಾಗಿದೆ ಅಂತ ಕೋರಿಕೊಂಡಿದ್ದಾರೆ.

(ಡಿ) ಆಶ್ರಯ ಬಡಾವಣೆಯ 2 ಅನಧಿಕೃತ ನಕ್ಷೆಗಳು ಲಭ್ಯವಾಗಿದ್ದು, ಅವುಗಳಲ್ಲಿ ನಿಯಮಾನುಸಾರ ಪಾರ್ಕಗಳು ಮತ್ತು ಸಿ.ಎ. ಉದ್ದೇಶಕ್ಕಾಗಿ ನಿವೇಶನಗಳನ್ನು ಮೀಸಲು ಇಟ್ಟಿರುವುದು ಕಂಡುಬಂದಿರುವುದಿಲ್ಲ. ಹಾಲಿ ಸ್ಥಳದಲ್ಲಿರುವಂತೆ 2 ನಕ್ಷೆಗಳು ಹೊಂದಾಣಿಕೆ ಆಗಿರುವುದಿಲ್ಲ. ಸದರಿ ಭೂಸ್ವಾಧೀನದ ವಿಚಾರವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ನಂ:47524-47527/2015 ರಲ್ಲಿ **Writ shall ensure declaring the**

**acquisition procccdings as having been lapsed** ಅಂತ ಆದೇಶವಾಗಿದ್ದು, ಇದರ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ನಂ:1554/2016 ಮತ್ತು 3321-3323/2015 ಗಳನ್ನು ಸಲ್ಲಿಸಲಾಗಿದ್ದು, ನ್ಯಾಯಾಲಯವು ಯಥಾಸ್ಥಿತಿ ಕಾಪಾಡಲು ಮಧ್ಯಂತರ ಆದೇಶವನ್ನು ಹೊರಡಿಸಿದೆ ಅಂತ ವರದಿಯಲ್ಲಿ ನಮೂದಿಸಿದ್ದಾರೆ.

19. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ

(1) ಪ್ರಾದೇಶಕ ಆಯುಕ್ತರ ಬದಲಾಗಿ ಅಪರ ಜಿಲ್ಲಾಧಿಕಾರಿಗಳು, ರಾಮನಗರ ಇವರನ್ನು ತನಿಖಾ ತಂಡದ ನೇತೃತ್ವವನ್ನು ವಹಿಸಲು ಸರ್ಕಾರದ ಆದೇಶವಾಗಿದೆ ಅಂತ ವರದಿಯಲ್ಲಿ ತಿಳಿಸಿರುವುದರಿಂದ, ಅಪರ ಪ್ರಾಧೇಶಿಕ ಆಯುಕ್ತರ ಹುದ್ದೆ ಖಾಲಿ ಇರುವುದನ್ನು ಭರ್ತಿ ಮಾಡಲು ತಕ್ಷಣ ಕ್ರಮವನ್ನು ತೆಗೆದುಕೊಳ್ಳಲು ಮತ್ತು ತನಿಖಾ ತಂಡದಿಂದ ಸಂಪೂರ್ಣ ವರದಿಯನ್ನು ಎದುರುದಾರರ ಶಿಸ್ತು ಪ್ರಾಧಿಕಾರವು ಪಡೆದುಕೊಳ್ಳಲು

(2) ಪೌರಾಯುಕ್ತರು ನಗರ ಸಭೆ ಚನ್ನಪಟ್ಟಣ ಇವರಿಗೆ ತನಿಖಾ ತಂಡವು ಕೋರುತ್ತಿರುವ ದಾಖಲೆಗಳನ್ನು ಹಾಜರುಪಡಿಸುವಲ್ಲಿ ಅಸಹಕಾರ ತೋರುತ್ತಿರುವ ಬಗ್ಗೆ ತಕ್ಷಣ ಗಮನಹರಿಸಿ ದಾಖಲೆಗಳನ್ನು ಕೊಡದೇ ಹೋದಲ್ಲಿ ಆದೇಶದ ಉಲ್ಲಂಘನೆ ಆಗಿದೆ ಅಂತ ಪರಿಗಣಿಸಿ ಮತ್ತು ನ್ಯಾಯಾಂಗ ನಿಂದನೆಗಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ಆಶ್ರಯ ಸಮಿತಿಯ ಹೊನ್ನಿಗಾನಹಳ್ಳಿ ಬಡಾವಣೆಯಲ್ಲಿ 147 ಫಲಾನುಭವಿಗಳ ಹೆಸರುಗಳನ್ನು ಮುಂದುವರೆಸಿ ಉಳಿದ 53 ಅನರ್ಹ ಫಲಾನುಭವಿಗಳ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು

(3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲು ನಂ:1554/2016 ಮತ್ತು 3321-3323/2015 ಗಳಲ್ಲಿ ವಿಚಾರಣೆಯಲ್ಲಿರುವ ಆಸ್ತಿಗಳನ್ನು ಹೊರತುಪಡಿಸಿ ಅಂತಿಮ ಆದೇಶ ಬಂದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು

(4) ಚನ್ನಪಟ್ಟಣ ನಗರ ಸಭೆ ವ್ಯಾಪ್ತಿಯ ಹೊನ್ನಿಗಾನಹಳ್ಳಿಯಲ್ಲಿ 1 ಎಕರೆ 16 ಗುಂಟೆ ನಿವೇಶನಗಳಿಗಾಗಿ ಮೀಸಲು ಇಟ್ಟಿರುವ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ನಿಯಮಾನುಸಾರ ತೆರವುಗೊಳಿಸಿ, ನಗರ ಸಭೆಯ ವಶಕ್ಕೆ ತೆಗೆದುಕೊಳ್ಳಲು ಪೌರಾಯುಕ್ತರು ನಗರ ಸಭೆ, ಚನ್ನಪಟ್ಟಣ ಇವರಿಗೆ ನಿರ್ದೇಶನವನ್ನು

ಕೊಟ್ಟು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/3/18

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ